"ಎಷ್ಟು ಮಾತಾಡ್ತಿ ಮಾರಾಯ್ತಿ? ಏನೋ ಒಂದೆರಡು ದಿನದ ಮಟ್ಟಿಗೆ ಊಟ ಹಾಕಿದ್ರೆ ಬಡತನ ಬರುತ್ತಾ ನಮ್ಗೆ?"

"ಯಾವಾಗ್ಲೂ ನೀವು ಹಿಂಗೇ ಹೇಳೋದು. ಬಂದೋರು ಇಲ್ಲೇ ಗೂಟ ಹೊಡ್ಕಂಡು ಕೂರೋದು. ಸಂಸಾರ ಪೇಟೇಲಿ. ಇಲ್ಲಿ ನಯಾಪೈಸೆ ಖರ್ಚಿಲ್ದೆ ಇವರಿಗೆ ನಮ್ಮನೇಲಿ ಉಪಚಾರ..."

ಬಾಯಲ್ಲಿ ಹಾಗೆಂದರೂ ಅಮ್ಮ ಯಾರೋ ಊರು, ಮನೆ ಬಿಟ್ಟು ಬಂದ ಅಪರಿಚಿತ ಜೀವಕ್ಕೆ ಎರಡು ಹೊತ್ತು ಊಟ ಹಾಕಲು ಹಿಂಜರಿಯುವವಳಲ್ಲ. ಜಿಪುಣೆಯೂ ಅಲ್ಲ. ಹಾಗಿರಬೇಕಾದ ಆವಶ್ಯಕತೆಯೂ ಇರಲಿಲ್ಲ.

